# ಕರೋನಮ್ಮ ಹೊರಡಮ್ಮ

ಆಪತ್ತಿನ ಕಾಲದಲ್ಲಿ ಜನ ದೇವರ ಮೊರೆ ಹೋಗಿ ರಕ್ಷಣೆಯನ್ನು ಬಯಸುವುದು ಸಹಜ. ಸಮಯಕ್ಕೆ ಸರಿಯಾಗಿ ಮಳೆಯಾಗದಿದ್ದರೆ, ಸಾಕು ಪ್ರಾಣಿಗಳಿಗೆ ತೊಂದರೆ ಮೇಲಿಂದ ಮೇಲೆ ಬಂದು ಎರಗಿದರೆ, ಸಾಂಕ್ರಾಮಿಕ ರೋಗ ರುಜಿನಗಳು ಊರಿಗೆ ಬಂದರೆ ಗ್ರಾಮದೇವತೆಯರಾದ ಗಡಿಮಾರಮ್ಮ, ದುರ್ಗಮ್ಮ, ಬೀರಮ್ಮ, ಕಾಟಮ್ಮ, ಗಾಳಿಯಮ್ಮ ಹೀಗೆ... ದೇವತೆಯ ಮೊರೆ ಹೋಗುತ್ತಾರೆ.

'ನಿನ್ನ ಕೋಪ ಶಮನ ಮಾಡಿಕೊಂಡು ಊರನ್ನು ಕಾಪಾಡು' ಎಂದು ಬೇಡುತ್ತಿದ್ದರು. ಆಕೆಯನ್ನು ಉಡಿತುಂಬಿ ಊರಿಂದ ಊರಿಗೆ ಗ್ರಾಮಸ್ಥರು ಬೀಳ್ಕೊಡುತ್ತಾರೆ. ಕೆಲವೆಡೆ ಗಾಳಿ–ದುರ್ಗಮ್ಮ ಈಗ ಕೊರೊನಾ ಕಾರಣಕ್ಕೆ ಕೊರೊನಾಮ್ಮನಾಗಿ ಹೊಸ ಅವತಾರ ಧರಿಸಿದ್ದಾಳೆ. ಕೆಲಸದ ನಿಮಿತ್ತ ಕೂಡ್ಲಿಗಿಯ ಗ್ರಾಮದ ಮುಖಾಂತರ ಬರುವಾಗ ನಮಗೆ ದರ್ಶನ ನೀಡಿದ ಕೊರೊನಮ್ಮನಿಗೆ ಹೋಳಿಗೆ, ಕಾಯಿ, ಕರ್ಪೂರ ನೀಡಿ ಆ ಊರಿಂದ ದಾಟಿಸಿದರು.

—ಮಹಾಂತೇಶ ಬಾಗೇವಾಡಿ ಚೊಳಚಗುಡ್ಡ





# ಧಬೆ ಧಬೆ ಜಲಪಾತ

ಹೀಗೆ ಮೇಲಿನಿಂದ ಮೂರು ಮೂರು ಪ್ರತ್ಯೇಕ ಜಲಧಾರೆಗಳ ಹಾಗೆ ಕಾಣುವ ಈ ಜಲಪಾತ ಇರುವುದು ಯಾದಗಿರಿ ಜಿಲ್ಲೆಯ ಗುರುಮಿಟ್ಕಲ್ ತಾಲ್ಲೂಕಿನ ನಜರಾಪುರ ಗ್ರಾಮದ ಹತ್ತಿರ. ಧಭೆ ಧಬೆ ಜಲಪಾತ ಎಂದು ಇದರ ಹೆಸರು. ಸುತ್ತಲೂ ಹಚ್ಚಹಸಿರು, ಮಧ್ಯದಲ್ಲಿ ಹಾಲ್ನೊರೆಯ ಧಾರೆ ಧುಮುಕುವ ನೀರಿನ ಭೋರ್ಗರೆತ ಮನಸೆಳೆಯುತ್ತದೆ. ಬಿಸಿಲನಾಡಿನ ಮಡಿಲಲ್ಲಿನ ಮಲೆನಾಡು ಎಂದು ಈ ಪ್ರದೇಶವನ್ನು ಕರೆಯಬಹುದು. ಮಳೆಗಾಲದಲ್ಲಿ ತುಂಬಿ ಹರಿಯುವ ಈ ಜಲಪಾತದ ರೌದ್ರಾವತಾರವನ್ನು ನೋಡುವುದೇ ಒಂದು ವಿಶಿಷ್ಟ ಅನುಭವ.

—ನರಸಿಂಹಾರೆಡ್ಡಿ ಯಂಕಮೊಳ, ಸೇಡಂ



# ಸೋಜಿಗದ ಚಿತ್ತಾರ

ಚಿತ್ರದುರ್ಗದ ರಾಜ ಭರಮಣ್ಣನಾಯಕ, ಉತ್ಸವಾಂಬ ದೇವಾಲಯವನ್ನು 17–18ನೇ ಶತಮಾನದಲ್ಲಿ ಕಟ್ಟಿಸಿದ್ದಾನೆ ಎನ್ನಲಾಗುತ್ತದೆ. ಐತಿಹಾಸಿಕ ಪ್ರಾಮುಖ್ಯ ಹೊಂದಿರುವ ಈ ದೇವಾಲಯದ ಕಂಭಗಳೆಲ್ಲವೂ ಕಲಾವೈವಿಧ್ಯದಿಂದ ಕೂಡಿವೆ. ಇಲ್ಲಿನ ನವರಂಗದಲ್ಲಿರುವ ಕಂಭಗಳು ಕೂಡಾ ವಿಶೇಷವಾಗಿವೆ. ಇಲ್ಲಿನ ಕಂಭವೊಂದರ ಮೇಲೆ ಎರಡು ಹಾವುಗಳ ರಚನೆಯನ್ನು ಗಮನಿಸಿದರೆ ಕಲಾವಿದನ ನೈಪುಣ್ಯ ಗಮನ ಸೆಳೆಯುತ್ತದೆ. ಎರಡು ಹಾವುಗಳು ಪರಸ್ಪರ ಬೆಸೆದುಕೊಂಡಿವೆ. ಒಂದನ್ನೊಂದು ಪ್ರತ್ಯೇಕಿಸಿ ನೋಡಲು ಆಗುವುದಿಲ್ಲ. ಯಾವುದರ ಬಾಲ ಯಾವುದು ಎಂಬುದೇ ಗೊತ್ತಾಗುವುದಿಲ್ಲ. ಅದರ ಮೇಲೆ ಪೆನ್ಸಿಲ್ ಎಳೆದರೂ ಗೊತ್ತಾಗುವುದೇ ಇಲ್ಲ. ಇಂತಹ ಹತ್ತಾರು ವೈಶಿಷ್ಟ್ಯ ಇಲ್ಲಿನ ಕಂಭಗಳಲ್ಲಿವೆ.

—ಕೆ.ವಿ. ಸಂತೋಷ್, ಹೊಳಲ್ಕೆರೆ